KA / BG - GPO/ 2515 /WPP-47/ 2009 - 2011



ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಗುರುವಾರ, ಏಪ್ರಿಲ್ ೩೦, ೨೦೦೯ (ವೈಶಾಖ ೧೦, ಶಕ ವರ್ಷ ೧೯೩೧)	ನಂ. ೨೬೮

Co-operation Secretariat

NOTIFICATION

No. Sayi 183 Asase 2007, Bangalore, Dated: 22nd April, 2009

Whereas the draft of the following rules further to amend the Karnataka Co-operative Services (Recruitment) Rules, 1989, was published as required by clause (1) of sub-section (2) of section 3 read with section 8 of the Karnataka State Civil Service Act, 1978 (Karnataka Act 14 of 1990) in Notification No. Sayi 183 Asase 2007 dated 13th March 2009 in the Part IV-A of Karnataka Gazette (Extraordinary) dated 23rd March 2009 inviting objections and suggestions from all the persons likely to be affected thereby within fifteen days from the date of its publication in the Official Gazette.

Whereas the said Gazette was made available to the public on 23rd March 2009.

And whereas no objections and suggestions have been received by the State Government.

Now, therefore, in exercise of the powers conferred by sub-section (1) of Section (3) read with Section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rules namely;

RULES

1. Title and Commencement :- (1) These rules may be called the Karnataka Co-operative Services (Recruitment) (Amendment) Rules, 2009.

(2) They shall come into force from the date of their publication in the Official Gazette.

2. Amendment of Schedule :- In the Schedule to the Karnataka Co-operative Services (Recruitment) Rules, 1989, In the entries relating to the category of post of Inspectors of Co-operative Societies at serial number 18, in column (3), for second proviso, the following shall be deemed to have been substituted with effect from 16th October, 2008, namely:-

"Provided further that the persons holding the posts of First Division Assistants on the date of commencement of the Karnataka Co-operative Services (Recruitment) (Amendment) Rules, 2008 shall be transferred to the posts of Inspectors of Co-operative Societies on their

exercising an irrevocable option within sixty days from the date of commencement of the Karnataka Co-operative Services (Recruitment) (Amendment) Rules, 2009 in public interest on **one time measure.** Notwithstanding anything contained in the Karnataka Civil Service (Seniority) Rules, 1957, the Seniority of the First Division Assistants so transferred shall be determined with reference to the date of first appointment to the post of First Division Assistant".

By order and in the name of the Governor of Karnataka,

NANJUNDAPPA
Under Secretary to Government
Co-operation Department

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಶನಿವಾರ, ಮೇ ೨, ೨೦೦೯ (ವೈಶಾಖ ೧೨, ಶಕ ವರ್ಷ ೧೯೩೧)	ನಂ. ೨೬೯

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಗ್ರಾಅಪ 115 ಗ್ರಾಪಂಕಾ 2008, ಬೆಂಗಳೂರು, ದಿನಾಂಕ: 2ನೇ ಮೇ, 2009

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರ 3ನೇ ಪ್ರಕರಣದ (1)ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ 3ನೇ ಪ್ರಕರಣದ 2(ಎ) ಉಪ ಪ್ರಕರಣದಲ್ಲಿ ಅಗತ್ಯಪಡಿಸಲಾದಂತೆ ಕರ್ನಾಟಕ ಸರ್ಕಾರವು ರೂಪಿಸಲು ಉದ್ದೇಶಿಸಿರುವ ಈ ಕೆಳಕಂಡ ನಿಯಮಗಳ ಕರಡನ್ನು ಈ ಮೂಲಕ ಪ್ರಕಟಿಸಿ ಇದರಿಂದ ಬಾಧಿತರಾಗಬಹುದಾದಂತಹ ಎಲ್ಲಾ ವ್ಯಕ್ತಿಗಳ ಮಾಹಿತಿಗೆ ತರಲಾಗಿದೆ ಮತ್ತು ಸದರಿ ಕರಡು ನಿಯಮಗಳನ್ನು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ಸೂಚನೆ ನೀಡಿದೆ.

ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ, ಮೇಲೆ ನಿಗದಿಪಡಿಸಿದ ಅವಧಿಯು ಮುಕ್ತಾಯಗೊಳ್ಳುವ ಮುನ್ನ ಸರ್ಕಾರದಲ್ಲಿ ಯಾವುದೇ ವ್ಯಕ್ತಿಗಳಿಂದ ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆ ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಡಾ: ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560001. ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ.

ಕರಡು ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ:– (1) ಈ ನಿಯಮಗಳನ್ನು ಕರ್ನಾಟಕ ಸಾಮಾನ್ಯ ಸೇವೆ (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಸರ್ಕಾರ ಶಾಖೆ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ [ವಿಶೇಷ] [ನೇಮಕಾತಿ] ನಿಯಮಗಳು, 2009 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

(3) ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006 ರಲ್ಲಿ ಏನೇ ಒಳಗೊಂಡಿದ್ದರೂ, ಈ ನಿಯಮಗಳು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 569 ಗ್ರಾಪಂಅ 2006, ದಿನಾಂಕ: 31–3–2008 ರಲ್ಲಿ ಸೃಜಿಸಲಾದ 3750 (ಮೂರು ಸಾವಿರದ ಏಳುನೂರ ಐವತ್ತು) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ನೇರ ನೇಮಕಾತಿಗೆ ಅನ್ವಯಿಸತಕ್ಕದ್ದು.

2. ವ್ಯಾಖ್ಯಾನ:– (1) ಈ ನಿಯಮಗಳಲ್ಲಿ, ಸಂದರ್ಭಾನುಸಾರ ಅಗತ್ಯವೆನಿಸಿದ ಹೊರತು:–

(ಎ) "ನೇಮಕಾತಿ ಪ್ರಾಧಿಕಾರ`` ಎಂದರೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.

(ಬಿ) "ಆಯ್ಕೆ ಪ್ರಾಧಿಕಾರ`` ಎಂದರೆ ಹಾಗೆಂದು ಆಗಿಂದಾಗ್ಗೆ ಸರ್ಕಾರದಿಂದ ಅಧಿಸೂಚಿಸಲ್ಪಟ್ಟ ಪ್ರಾಧಿಕಾರ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ವ್ಯಾಖ್ಯಾನಿಸದ ಪದಗಳು ಮತ್ತು ಅಭಿವ್ಯಕ್ತಿಗಳು ಅವುಗಳಿಗೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978 ಅಥವಾ ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಆಯ್ಕೆ ಮೂಲಕ ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು, 2006ಗಳಿಗೆ ವಹಿಸಿದ ಅರ್ಥವನ್ನೇ ಹೊಂದಿರತಕ್ಕದ್ದು.

3. ಕನಿಷ್ಟ ವಿದ್ಯಾರ್ಹತೆ ಮತ್ತು ನೇಮಕಾತಿ ವಿಧಾನ:– ಈ ನಿಯಮಗಳಡಿಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿಯನ್ನು ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978ರ ಅವಕಾಶಗಳಾನುಸಾರ ನಡೆಸತಕ್ಕದು ಮತ್ತು ಈ ಹುದ್ದೆಗೆ ಕನಿಷ್ಟ ವಿದ್ಯಾರ್ಹತೆ ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಅಥವಾ ತತ್ಸಮಾನ ವಿದ್ಯಾರ್ಹತೆ.

4. ವಯಸ್ಸು:– ವಯೋಮಿತಿಯು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರ ನಿಯಮ 6 ರಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

5. ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು 1978 ರ ಅನ್ವಯಿಸುವಿಕೆ:– ಈ ನಿಯಮಗಳಡಿಯಲ್ಲಿ ನೇಮಕಾತಿಗಾಗಿ ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978 ರ ಅವಕಾಶಗಳು ಈ ಕೆಳಕಂಡ ಮಾರ್ಪಾಡುಗಳೊಂದಿಗೆ ಅನ್ವಯಿಸುತ್ತವೆ, ಅವುಗಳೆಂದರೆ:–

1) ನೇಮಕಾತಿ ಪ್ರಾಧಿಕಾರ ಎಂದರೆ ನಿಯಮ 2 ರ ಉಪ ನಿಯಮ 1 ರ ಖಂಡ - ಎ ರಲ್ಲಿ ವ್ಯಾಖ್ಯಾನಿಸಿರುವಂತೆ.

2) ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978 ರ ನಿಯಮ 7 ರ ಉಪನಿಯಮ 2 ಮತ್ತು ನಿಯಮ 13 ಈ ನಿಯಮಗಳಿಗೆ ಅನ್ವಯಿಸತಕ್ಕದ್ದಲ್ಲ.

3) ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾತಿಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯು ತಾನು ನೇಮಕಾತಿ ಹೊಂದಲು ಇಚ್ಛಿಸುವ ಜಿಲ್ಲೆಯನ್ನು ಸೂಚಿಸತಕ್ಕದ್ದು ಎಂಬ ಮಾರ್ಪಾಡಿನೊಂದಿಗೆ ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978 ರ ನಿಯಮ 10 ಈ ನಿಯಮಗಳಿಗೆ ಅನ್ವಯಿಸತಕ್ಕದ್ದು.

4) ಕರ್ನಾಟಕ ನಾಗರೀಕ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978 ರಲ್ಲಿ ಎಲ್ಲೆಲ್ಲಿ "ಆಯೋಗ" ಎಂಬ ಪದ ಇದೆಯೋ ಅದನ್ನು "ಆಯ್ಕೆ ಪ್ರಾಧಿಕಾರ" ಎಂದು ಓದಿಕೊಳ್ಳತಕ್ಕದ್ದು.

6. ಗಣಕಯಂತ್ರ ಜ್ಞಾನದ ಬಗ್ಗೆ ಅರ್ಹತಾ ಪರೀಕ್ಷೆ:– 1) ಯಾವುದೇ ಸೇವೆ ಅಥವಾ ಹುದ್ದೆಗೆ ಸಂಬಂಧಪಟ್ಟಂತೆ, ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ಅಥವಾ ಕರ್ನಾಟಕ ರಾಜ್ಯ ನಾಗರೀಕ ಸೇವಾ ಕಾಯಿದೆ, 1978 (1990 ರ ಕರ್ನಾಟಕ ಕಾಯಿದೆ 14) ರಡಿಯಲ್ಲಿ ವಿಶೇಷವಾಗಿ ಮಾಡಲಾದ ಅಥವಾ ಮಾಡಲಾಗಿದೆಯೆಂದು ಭಾವಿಸಲಾದ ನೇಮಕಾತಿ ನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ ಸಹ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳ ಆಯ್ಕೆ ಪ್ರಕ್ರಿಯೆಯು ಗಣಕ ಯಂತ್ರ ಜ್ಞಾನದ ಬಗ್ಗೆ ಒಂದು ಅರ್ಹತಾ ಪರೀಕ್ಷೆಯನ್ನು ಒಳಗೊಂಡಿರತಕ್ಕದ್ದು.

2) ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿದ ಅನುಸಾರ ಅರ್ಹತಾ ಪಟ್ಟಿ ಸಿದ್ದಪಡಿಸಿದ ನಂತರ ನೇರ ನೇಮಕಾತಿಗಾಗಿ ಗಣಕ ಯಂತ್ರ ಅರ್ಹತಾ ಪರೀಕ್ಷೆಯನ್ನು ಆಯ್ಕೆ ಪ್ರಾಧಿಕಾರವು ನಡೆಸತಕ್ಕದ್ದು. ನೇಮಕಾತಿಗಾಗಿ ನಿಗದಿಪಡಿಸಿದ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಿರುವ ಮೀಸಲಾತಿ ಪ್ರಮಾಣದ ಆಧಾರದ ಮೇಲೆ ಆ ವರ್ಗಕ್ಕೆ ಸೇರಿದ ಅಭ್ಯರ್ಥಿಗಳನ್ನು ಕರೆಯುವ ನಿಬಂಧನೆಗೊಳಪಟ್ಟು, ಆಯ್ಕೆ ಪ್ರಾಧಿಕಾರವು ಸಾಧ್ಯವಾದಷ್ಟು ಮಟ್ಟಿಗೆ ನಿಗದಿಪಡಿಸಿದ ಹುದ್ದೆಗಳ ನಾಲ್ಕರಷ್ಟು ಸಂಖ್ಯೆಯ ಅಭ್ಯರ್ಥಿಗಳನ್ನು ಗಣಕ ಯಂತ್ರ ಜ್ಞಾನದ ಪರೀಕ್ಷೆಗೆ ಕರೆಯತಕ್ಕದ್ದು. ಸದರಿ ಪರೀಕ್ಷೆಗೆ ನಿಗದಿಪಡಿಸಿದ ಗರಿಷ್ಟ ಅಂಕಗಳ ಪೈಕಿ, ಶೇಕಡಾ 75 ಕ್ಕಿಂತ ಕಡಿಮೆ ಇಲ್ಲದಂತೆ ಅಂಕ ಪಡೆದ ಹೊರತು ಆ ಅಭ್ಯರ್ಥಿಯನ್ನು ನೇಮಕಾತಿಗಾಗಿ ಆಯ್ಕೆ ಹೊಂದಿರುವುದಾಗಿ ಅಥವಾ ಅರ್ಹನಿರುವುದಾಗಿ ಘೋಷಿಸತಕ್ಕದ್ದಲ್ಲ.

7. ಅಭ್ಯರ್ಥಿಗಳ ನೇಮಕಾತಿ:– ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ನೇಮಕಾತಿ ಹೊಂದಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಆಯ್ಕೆ ಪ್ರಾಧಿಕಾರದಿಂದ ಸ್ವೀಕರಿಸಿದ ನೇಮಕಾತಿ ಪ್ರಾಧಿಕಾರಗಳು ಆಯ್ಕೆ ಪ್ರಾಧಿಕಾರವು ಕಳುಹಿಸಿರುವ ಪಟ್ಟಿಯಲ್ಲಿ ಅಭ್ಯರ್ಥಿಗಳ ಹೆಸರನ್ನು ಜೋಡಣೆ ಮಾಡಿರುವ ಕ್ರಮಾನುಸಾರ ಅಭ್ಯರ್ಥಿಗಳನ್ನು ಈ ಹುದ್ದೆಗಳಿಗೆ ನೇಮಕಾತಿ ಮಾಡತಕ್ಕದ್ದು. ಆ ಹುದ್ದೆಗೆ ನಿಗದಿಪಡಿಸಿದ ಮತ್ತು ತನಗೆ ವಹಿಸಿದ ಮೊದಲಿನ ಪಟ್ಟಿಯಲ್ಲಿನ ಎಲ್ಲಾ ಅಭ್ಯರ್ಥಿಗಳನ್ನು ನೇಮಕ ಮಾಡುವವರಗೆ ನೇಮಕಾತಿ ಪ್ರಾಧಿಕಾರವು ಹೆಚ್ಚುವರಿ ಪಟ್ಟಿಯಲ್ಲಿ ಸೇರಿಸಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡತಕ್ಕದ್ದಲ್ಲ.

8. ಪಟ್ಟಿಗಳು ಜಾರಿಯಲ್ಲಿರುವ ಅವಧಿ:– ಆಯ್ಕೆ ಪ್ರಾಧಿಕಾರವು ಸಿದ್ದಪಡಿಸಿದ ಹಾಗೂ ನೇಮಕಾತಿ ಪ್ರಾಧಿಕಾರವು ನಿಯಮ 7 ರ ಅಡಿಯಲ್ಲಿ ಸ್ವೀಕರಿಸಿದ ಅಭ್ಯರ್ಥಿಗಳ ಆಯ್ಕೆ ಪಟ್ಟಿಗಳು ಅಂತಹ ಪಟ್ಟಿಗಳಲ್ಲಿ ಸೇರಿರುವ ಎಲ್ಲಾ ಅಭ್ಯರ್ಥಿಗಳು ನೇಮಕಾತಿ ಹೊಂದುವವರಗೆ ಊರ್ಜಿತವಾಗಿರುತ್ತದೆ.

9. ಇತರೆ ನಿಯಮಗಳ ಅನ್ವಯಿಸುವಿಕೆ:– ಕರ್ನಾಟಕ ನಾಗರೀಕ ಸೇವಾ ನಿಯಮಗಳು, ಕರ್ನಾಟಕ ನಾಗರೀಕ ಸೇವಾ (ಪ್ರೊಬೇಷನ್) ನಿಯಮಗಳು, 1977 ಮತ್ತು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ರಡಿಯಲ್ಲಿ ಮಾಡಲಾದ ಅಥವಾ ಮಾಡಲಾಗಿದೆಯೆಂದು ಭಾವಿಸಲಾದ ಹಾಗೂ ಈ ನಿಯಮಗಳ ಅವಕಾಶಗಳಿಗೆ ಎಲ್ಲಿಯವರೆಗೆ ವ್ಯತಿರಿಕ್ತವಲ್ಲವೋ ಅವುಗಳು ಈ ನಿಯಮಗಳಡಿಯಲ್ಲಿ ನೇಮಕಾತಿ ಹೊಂದಿದ ವ್ಯಕ್ತಿಗಳಿಗೆ ಅನ್ವಯಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋವಿಂದರಾಜು

ನಿರ್ದೇಶಕರು (ಪಂ. ರಾಜ್) ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

Rural Development & Panchayat Raj Secretariat

NOTIFICATION

No. RDP 115 GPK 08, Bangalore, Dated: 2nd May, 2009

The draft of the following rules which the Government of Karnataka proposes to make in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act, for the information of all persons likely to be affected thereby and notice is hereby given that the said draft rules will be taken into consideration after the expiry of fifteen days from the date of its publication in the Official Gazette.

Any objection or suggestion which may be received by the State Government from any person with respect to the said draft rules before the expiry of the period specified above, will be considered by the State Government. Objections and suggestions may be addressed to the Secretary to Government, Rural Development and Panchayat Raj Department, M.S. Building, Dr. B.R. Ambedkar Veedhi, Bangalore - 560 001.

DRAFT RULES

1. **Title, commencement and application.-** (1) These rules may be called the Karnataka General Service (Development Branch and Local Government Branch) Recruitment of Panchayat Development Officers (Special) [Recruitment] Rules, 2009.

(2) These rules shall come into force on the date of publication in the Official Gazette.

(3) Notwithstanding anything contained in the Karnataka Civil Services (General Recruitment) Rules, 1977 or the Karnataka Civil Services (Direct Recruitment by Competitive Examinations and Selection) (General) Rules, 2006, these rules shall apply for Direct Recruitment to 3750 (three thousand seven hundred and fifty) posts of Panchayat Development Officers created in Government Order No. RDP 569 GPA 2006, dated 31-3-2008.

2. **Definitions.-** (1) In these rules, unless the context otherwise requires,-

(a) "Appointing Authority" means the Chief Executive Officer of Zilla Panchayat of the respective District.

(b) ``Selection Authority`` means the authority notified by Government as such from time to time.

(2) Words and expressions used but not defined in these rules shall have the same meaning assigned to it in the Karnataka Civil Services (General Recruitment) Rules, 1977 or the Karnataka Civil Services (Recruitment to the Ministerial posts) Rules, 1978 or the

Karnataka Civil Services (Direct Recruitment by Competitive Examinations and Selection) (General) Rules, 2006.

3. Minimum Qualification and Method of Recruitment.- The recruitment of the Panchayat Development Officers under these rules shall be conducted in accordance with the provisions of the Karnataka Civil Services (Recruitment to the Ministerial posts) Rules, 1978 and the minimum qualification for this post is a Bachelors Degree of a recognized university or equivalent qualification.

4. Age Limit: - The age limit shall be as specified in rule 6 of the Karnataka Civil Services (General Recruitment) Rules, 1977.

5. Application of the Karnataka Civil Services (Recruitment to the Ministerial Posts) Rules, 1978.- The Provisions of the Karnataka Civil Services (Recruitment to the Ministerial Posts) Rules, 1978 are applicable to the recruitment under these rules with the following modifications, namely:-

[1] Appointing Authority means the Appointing Authority as defined in clause [a] of sub-rule [1] of rule2.

[2] Sub-rule (2) of rule 7 and rule 13 of the Karnataka Civil Services [Recruitment to the Ministerial Posts] Rules, 1978 shall not be applicable to these rules.

[3] Rule-10 of the Karnataka Civil Services [Recruitment to the Ministerial Posts] Rules, 1978 shall be applicable to these rules with the modification that a person applying for admission to a competitive examination may indicate in his application the district for appointment to the post of Panchayath Development Officer.

[4] Wherever the word ``Commission`` appears in the Karnataka Civil Services [Recruitment to the Ministerial Posts] Rules, 1978 shall be read as `` Selection Authority``.

6. Qualifying test in Computer Literacy:- (1) Notwithstanding anything contained in the Karnataka Civil Services (General Recruitment) Rules, 1977 or the rules of recruitment specially made or deemed to have been made under the Karnataka State Civil Services Act. 1978 (Karnataka Act 14 of 1990) in respect of any service or post, the selection process for direct recruitment to the posts of Panchayath Development Officers shall include a qualifying test in Computer Literacy.

(2) The Computer Literacy Test for direct recruitment shall be conducted by the Selection Authority after the preparation of the merit list as prescribed in the recruitment rules. The Selection Authority shall call for the Computer Literacy Test, as far as may be, four times the number of candidates as there are vacancies in the order of merit, subject to calling the candidates belonging to the Scheduled Castes, Scheduled Tribes and Other Backward Classes in the same ratio as the vacancies are reserved for them. No candidate shall be declared as

selected or eligible for appointment, unless he has passed the Computer Literacy Test by securing not less than seventy five percent of the maximum marks prescribed for the said test.

7. Appointment of candidates:- The Appointing Authorities receiving list of candidates suitable for appointment to the posts of Panchayath Development Officers from the Selection Authority shall appoint the candidates to these posts in the order in which their names are arranged in the list sent by the Selection Authority. No appointment of a candidate included in the additional list shall be made by the appointing authority until all the candidates included in the earlier list relating to that post and assigned to it are appointed.

8. Period of operation of the Lists:- The List of candidates prepared by the Selection Authority and received by the appointing authority under rule-7 shall be valid till all the candidates included in such lists are appointed.

9. Application of other rules: - The Karnataka Civil Service Rules, Karnataka Civil Services (Probation) Rules, 1977 and such other rules for the time being in force regulating the conditions of service made or deemed to have been made under the Karnataka State Civil Services Act, 1978 (Karnataka Act 14 of 1990) in so far as they are not inconsistent with the provisions of these rules shall be applicable to the persons appointed under these rules.

By Order and in the name of the Governor of Karnataka,

GOVINDARAJU
Director (PR) and Ex-officio
Joint Secretary to Government
Rural Development & Panchayat Raj Department

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಶನಿವಾರ, ಮೇ ೨, ೨೦೦೯ (ವೈಶಾಖ ೧೨, ಶಕ ವರ್ಷ ೧೯೩೧)	ನಂ. ೨೩೦

Home Secretariat

NOTIFICATION

No. HD 3 SCF 2009, Bangalore, Dated: 6th April, 2009

In exercise of the powers conferred by clause (a) of Section 8 of the Conservation of Foreign Exchange and Prevention of Smuggling Activities Act, 1974 (Central Act No. 52 of 1974) and in supersession of Notification No. HD 05 SCF 2007, dated 2.7.2007, the Government of Karnataka hereby reconstitute the Advisory Board with immediate effect for the purpose of the said Act, consisting of the following namely:-

1) Hon'ble Sri Justice K.Sreedhar Rao : Chairman
Judge, High Court of Karnataka, Bangalore.

2) Hon'ble Sri Justice H.G.Ramesh : Member
Judge, High Court of Karnataka, Bangalore.

3) Hon'ble Sri Justice S.Abdul Nazeer : Member
Judge, High Court of Karnataka, Bangalore.

By order and in the name of the Governor of Karnataka,

K.C. SIDDAPPA
Under Secretary to Government
Home Department
(L&O, COFEPOSA & Prosecution)

ಸರ್ಕಾರಿ ಮುದ್ರಣಾಲಯ, ಬೆಂಗಳೂರು.